

'ಚಿರಂಜೀವಿ ಕೇಶವಕುಮಾರ್ ನಮಗೆ ಪದವಿ ಓದುವಾಗಲೇ ಪರಿಚಯ, ನನ್ನ ಪೂರ್ವಾಶ್ರಮದ ಒಡನಾಡಿ, ಹಲವು ಮೈಲಿ ನಡೆದೇ ಕಾಲೇಜಿಗೆ ಬರುತ್ತಿದ್ದರು, ಬರೆಯುವ ತುಡಿತ, ಸಮಾಜದ ಮೇಲುಕೀಳುಗಳ ನಾಶಕ್ಕೆ ಕಟಿಬದ್ಧರಾಗಿ ಕೆಲಸ ಮಾಡುವ ಗುಣ ಆಗಲೇ ಇವರಲ್ಲಿತ್ತು' ಮುಂತಾಗಿ ಇವನಲ್ಲಿ ಇರುವ, ಇಲ್ಲದಿರುವ ಗುಣಗಳನ್ನೆಲ್ಲಾ ಸೇರಿಸಿ ನಾಟಕೀಯವಾಗಿ ಭಾಷಣ ಆರಂಭಿಸಿದರು. ಸಭಿಕರ ಕರತಾಡನ. ಮಡದಿಮಗಳ ಮುಖದಲ್ಲಿ ತುಂಟ ನಗೆ.

ಈ ಎಲ್ಲದರಿಂದ ಅನ್ಯಮನಸ್ಕನಾಗಿದ್ದ ಕೇಶವನಿಗೆ ಇದ್ದುದು ಒಂದೇ ಯೋಚನೆ. ಇವನು ಸ್ವಾಮೀಜಿ ಆಗಿದ್ದಾನೆಂದರೆ ಆಕೆ ಏನಾದಳು? ಕೊನೆಯ ಸಲ ಅವಳನ್ನು ಕಂಡಾಗ ಬಸುರಿ ಬೇರೆ. ತಲೆ ಗಿರ್ ಅನ್ನುತ್ತಿತ್ತು. ಈ ಸಲ ಅವನ ಕಣ್ಣ ಮುಂದೆ ಬೇರೆಲ್ಲಾ ಇಮೇಜುಗಳು ಮರೆಯಾಗಿ ಆಕೆಯದೊಂದೇ ಉಳಿದಿತ್ತು. ಭಾಷಣ ಮುಗಿಸಿದ ಸ್ವಾಮೀಜಿ ಇವನ ಬಲಗೈಯನ್ನು ಅವರ ಬಲಗೈಯಲ್ಲಿ ಹಿಡಿದು ಎಡಗೈನಿಂದ ಅದುಮುತ್ತಾ, 'ಕಾರ್ಯಕ್ರಮ ಮುಗಿದ ಮೇಲೆ ಮಠಕ್ಕೆ ಬನ್ನಿ, ಕಾರು ಕಳಿಸಿರುತ್ತೇನೆ, ಒಬ್ಬರೇ' ಅಂತಂದು ಹೊರಟೇ ಹೋದರು.

ಕೇಶವ ಕಾರಿನಲ್ಲೇ ಧುಮುಗುಡುತ್ತಿದ್ದ. ರಂಗನಾಯಕಮ್ಮನ ಬದುಕಿಗೆ ಕೊಳ್ಳಿ ಇಟ್ಟದ್ದಕ್ಕೆ ಸ್ವಾಮೀಜಿಯನ್ನು ತರಾಟೆಗೆ ತೆಗೆದುಕೊಳ್ಳಬೇಕೆಂದುಕೊಂಡ. ಭೇಟಿಯಾದ ಕೂಡಲೇ ಸ್ವಾಮಿ ಎನ್ನಬೇಕೋ ಓಬಳೇಶ್ ಎನ್ನಬೇಕೋ ಎಂಬ ಗೊಂದಲ ಬೇರೆ.

ಮಠ ಬಂತು. ಇವನನ್ನೇ ಕಾಯುತ್ತಿದ್ದವರಂತೆ ಸ್ವಾಮೀಜಿ ಕೈಹಿಡಿದು ಒಳಗೆ ಕರೆದುಕೊಂಡು ಬಾಗಿಲು ಹಾಕಿದರು. ಕೇಶವ ಅವರ ಭವ್ಯ ಕೋಣೆಯನ್ನು ದಿಟ್ಟಿಸಿದ. ಸಮತಾ ಕೂಟದಲ್ಲಿ ಇವನು ಮಾಡುತ್ತಿದ್ದ ಭಾಷಣಗಳೇನು, ಇಲ್ಲಿ ಆಗಿರುವುದೇನು. ಮಧ್ಯಾಹ್ನ ಟೀ, ಬನ್ನಿಗೆ ಇಬ್ಬರೂ ಪರದಾಡುತ್ತಿದ್ದ ದಿನಗಳೇನು. ಈಗಿನ ಐಷಾರಾಮವೇನು.

'ಹೇಗಿದ್ದೀರಾ ಓಬಳೇಶ್ವರ ಸ್ವಾಮಿಗಳೇ.' ಎಷ್ಟು ನಿಯಂತ್ರಿಸಿಕೊಂಡರೂ ಧ್ವನಿಯಲ್ಲಿ ವ್ಯಂಗ್ಯವನ್ನು ಮುಚ್ಚಿಡಲಾಗಲಿಲ್ಲ.

'ಇದೆಲ್ಲಾ ಹಿಂದಿನವರದು, ನಾವು ಬಯಸಿದ್ದಲ್ಲ.' ಸ್ವಾಮಿಗಳು ಆಂಟಿಸಿಪೇಟರಿ ಬೇಲ್ ತೆಗೆದುಕೊಂಡವರಂತೆ ಮಾತಾಡಿದರು. ದನಿಯಲ್ಲಿ ಬಲವಿರಲಿಲ್ಲ.

'ಅಲ್ಲಿಂದ ಮಾಯವಾಗಿ ಇಲ್ಲಿ ಈ ವೇಷ ಹಾಕ್ಕೊಂಡು ಸಿಗ್ತೀರಾ ಅಂದ್ಕೊಂಡಿರಲಿಲ್ಲ ಬಿಡಿ.' ವ್ಯಂಗ್ಯ ಇನ್ನಷ್ಟು ಹರಿತವಾಗಿತ್ತು.

ಕೇಶವನ ಮಾತಿಗೆ ಎದುರಾಡಲಾರದೆ ಎಲ್ಲ ಜಾತಿಗಳಿಂದಲೂ ಒಬ್ಬೊಬ್ಬರನ್ನು ಹುಡುಕಿ ಸ್ವಾಮಿಗಳನ್ನಾಗಿ ಮಾಡುವ ಮಠವೊಂದರ ಪ್ರಯೋಗಕ್ಕೆ ಮಾದಿಗರಹಟ್ಟಿಯವನಾದ ತಾನು ಸಿಲುಕಿದ ಬಗೆಯನ್ನು ವಿವರಿಸಿದರು.

'ಅವರು ಬಲವಂತ ಮಾಡಿದ್ರೆ ಕುವೆಂಪು, ತೇಜಸ್ವಿಯವರನ್ನು ಓದಿಕೊಂಡ ನಿನ್ನ ವಿವೇಕ ಏನ್ ಕಳ್ಳೆ ಕಾಯ್ ತಿಂತಾ ಇತ್ತಾ, ಜವಾಬ್ದಾರಿ ಎಲ್ಲಿಗೆ ಹೋಗಿತ್ತೀ' ಮಾತು ಬಿರುಸಾಗಿ ಬಂತು. ಅವನಿಗರಿವಿಲ್ಲದೇ ಏಕವಚನ, ಬಹುವಚನಗಳೆಲ್ಲಾ ಒಟ್ಟಿಗೇ ಸೇರಿಕೊಂಡಿದ್ದವು.

'ಹುಟ್ಟಾ ಬಡತನ ಕಂಡಿದ್ದ ಅಪ್ಪಅಮ್ಮ ಸ್ವಾಮೀಜಿ ಆದ್ರೆ ದೊಡ್ಡ ಆಸ್ತಿ, ಕಾರು, ಮಸ್ತು ದುಡ್ಡು ಸಿಗುತ್ತೆ ಅಂತ ಆಸೆ ಬಿದ್ದು ಒಪ್ಪಿಸಿಬಿಟ್ರು' ಎಂದು ಹೇಳುತ್ತಾ ಪೇಚಾಡಿದರು. ಆ ಮಾತುಗಳಲ್ಲಿ ಸುಳ್ಳೇನೂ ಕಾಣಲಿಲ್ಲ ಕೇಶವನಿಗೆ. ಆದರೆ ಈ ಕಂತೆ ಪುರಾಣದಲ್ಲೆಲ್ಲಾ ಆಸಕ್ತಿ ಇರಲಿಲ್ಲ. ರಂಗನಾಯಕಮ್ಮನ ವಿಷಯ ಕೇಳಬೇಕಿತ್ತು, ಹೇಗೆ ಪ್ರಸ್ತಾಪಿಸುವುದು ಎಂದು ಯೋಚಿಸತೊಡಗಿದ.

ಆಗ...

ಅದುವರೆಗೂ ನಿಂತೇ ಮಾತಾಡುತ್ತಿದ್ದ ಸ್ವಾಮಿಗಳು ತಟಕ್ಕನೆ ಬಂದು, 'ರಂಗಮ್ಮ ಸಿಕ್ಕಿದ್ರಾ, ಎಲ್ಲಿದ್ದಾರೆ ಅಂತ ಏನಾದ್ರೂ ಗೊತ್ತಾಯ್ತಾ' ಎಂದು ಕೇಶವನ ಕೈಗಳನ್ನು ಹಿಡಿದುಕೊಂಡರು. ಕೇಶವನಿಗೆ ಆಶ್ಚರ್ಯವಾಯಿತು. ಇವನ ಮಾತುಗಳು ಅವರ ಬಾಯಲ್ಲೇ ಬಂದಿದ್ದವು.

'ಇನ್ನೂ ನೆನಪಿದ್ಯಾ ತಮಗೆ.'

ಸ್ವಾಮೀಜಿ ಕಣ್ಣಲ್ಲಿ ನೀರು ಹಾಕಿಕೊಂಡರು. ತಾನು ಕಾಲೇಜು ಬಿಟ್ಟದ್ದು, ಸ್ವಾಮೀಜಿ ಆಗಿದ್ದೆಲ್ಲವೂ ಹದಿನೈದೇ ದಿನದಲ್ಲಿ ನಡೆದುಹೋಗಿದ್ದಾಗಿಯೂ ಆ ಅವಧಿಯಲ್ಲಿ ಆಕೆಯನ್ನು ಹುಡುಕಲು ಪಟ್ಟ ಪ್ರಯತ್ನವೆಲ್ಲಾ ಫಲ ಕೊಡಲಿಲ್ಲವೆಂತಲೂ ಹೇಳುತ್ತಾ ಮುಖ ಮುಚ್ಚಿಕೊಂಡರು. ಕಣ್ಣಲ್ಲಿ ಊರಿದ ನೀರು ಬೆರಳ ಸಂದುಗಳಿಂದ ದಳದಳ ಇಳಿಯಿತು. ಮೈಮೇಲೆ ಕಾವಿ ನಿಲುವಂಗಿ ಬಿಟ್ಟರೆ ಕೇಶವನಿಗೆ ಹಳೇ ಓಬಳೇಶನನ್ನು ನೋಡಿದಂತಾಗಿ ಅವನ ಮೇಲಿದ್ದ ಸಿಟ್ಟೆಲ್ಲಾ ಇಳಿದುಹೋಯಿತು.

ಮುಂದಿನ ಒಂದು ಗಂಟೆಕಾಲ ಅವರು ಹದಿನೈದು ವರ್ಷ ಮುಂಚಿನ ಕೇಶ್ವಣ್ಣಓಬ್ಳಿಯೇ ಆಗಿಬಿಟ್ಟರು. ರಂಗಮ್ಮನನ್ನು ಹುಡುಕುವ ಜವಾಬ್ದಾರಿಯನ್ನು ಕೇಶವನ ಹೆಗಲಿಗೆ ಹಾಕಿದ ಓಬಳೇಶ್ ಆಕೆ ಸಿಕ್ಕ ತಕ್ಷಣ ಮಠ ತ್ಯಜಿಸಿ ಮದುವೆಯಾಗುವುದಾಗಿ ಘೋಷಿಸಿಬಿಟ್ಟ.

ವಾಪಸ್ಸು ಹೊರಟ ಕೇಶವನಿಗೆ ಮಠಕ್ಕೆ ಬರುವಾಗ ಇದ್ದ ಗೊಂದಲಗಳು ದುಪ್ಪಟ್ಟಾಗಿದ್ದವು.

ಮುಂದಿನ ಒಂದು ತಿಂಗಳು ಆಕೆಯನ್ನು ಹುಡುಕದ ಸ್ಥಳವಿಲ್ಲ. ಕೊನೆಯ ಬಾರಿ ಭೇಟಿಯಾದಾಗ ಮಿಡಿಗೇಶಿ ಪ್ರೌಢಶಾಲೆಯಲ್ಲಿ ಟೀಚರ್ ಎಂದು ತಿಳಿದಿತ್ತು. ಅಲ್ಲಿ ಕೇಳಿದರೆ ಹದಿನೈದು ವರ್ಷಗಳ ಹಿಂದೆಯೇ ಹಿರಿಯೂರಿಗೆ ವರ್ಗವಾಗಿದ್ದ ಮಾಹಿತಿ ಸಿಕ್ಕಿತು. ಅಂದರೆ ಓಬಳೇಶ್ ಸ್ವಾಮೀಜಿಯಾದ ಕೆಲವು ತಿಂಗಳಲ್ಲೇ ಆಕೆ ವರ್ಗಾವಣೆ ತೆಗೆದುಕೊಂಡಿದ್ದಳು. ಹಿರಿಯೂರಿನಲ್ಲಿಯೂ ಕೆಲವೇ ತಿಂಗಳು ಇದ್ದು ಮತ್ತೆ ನೆಲಮಂಗಲಕ್ಕೆ. ಅಲ್ಲಿಂದ ದೊಡ್ಡಬಳ್ಳಾಪುರಕ್ಕೆ.

ಒಂದೇ ವರ್ಷದಲ್ಲಿ ಇಷ್ಟೊಂದು ಕಡೆ ವರ್ಗವಾಗಬೇಕಾದರೆ ಆಕೆ ಎಷ್ಟು ಮುಜುಗರ ಅನುಭವಿಸಿರಬೇಡ ಎಂದು ಊಹಿಸಿ ಸಂಕಟವಾಯಿತು. ಹೇಗಾದರೂ ಮಾಡಿ ಆಕೆಯನ್ನು ಹುಡುಕಲೇಬೇಕೆಂದು ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಅಲೆದಾಡಿದ. ದೊಡ್ಡಬಳ್ಳಾಪುರ ಹೈಸ್ಕೂಲಿನಲ್ಲಿ ಕೆಲವೇ ದಿನ ಹಾಜರಾತಿ ಹಾಕಿ ನಂತರ ಸುದೀರ್ಘ ಗೈರುಹಾಜರಾಗಿದ್ದರೆಂದು ಹೆಡ್ ಮಾಸ್ಟರ್ ರಿಜಿಸ್ಟರ್ ತೋರಿಸಿ 'ಇಲಾಖೆಯಲ್ಲಿ ವಿಚಾರಿಸಿ' ಎಂದರು.

ಇದುವರೆಗೂ ಶಾಲೆಗಳಲ್ಲೇ ಆಕೆಯ ಜಾಡು ಹಿಡಿಯಲು ಅಲೆದಾಡುತ್ತಿದ್ದ ಕೇಶವನಿಗೆ ಆಕೆಯ ಊರಿನಲ್ಲಿ ಒಮ್ಮೆ ಕೇಳಬೇಕೆನ್ನಿಸಿತು. ದೊಡ್ಡಬಳ್ಳಾಪುರ ಸ್ಕೂಲಿನಲ್ಲಿ ಆಕೆ ಸುದೀರ್ಘ ಗೈರುಹಾಜರಿ ಹಾಕಿದ್ದುದೂ ಇದಕ್ಕೆ ಕಾರಣ. ತಮಾಷೆ ಎಂದರೆ ಆಕೆಯ ಹುಟ್ಟೂರು ತಿಳಿದಿರಲಿಲ್ಲ. ಓಬಳಿಗೆ ಫೋನ್ ಮಾಡಿದಾಗ ಆಕೆಯ ಅಮ್ಮನ ಮನೆ ಐಡಿ ಹಳ್ಳಿ ಎಂದು ಗೊತ್ತಾಯಿತು.

ಐಡಿ ಹಳ್ಳಿಗೆ ಹೋಗುತ್ತಾ ಇದೆಲ್ಲಾ ಹೇಗೆ ಶುರುವಾಯಿತು ಎಂದು ಚಿಂತಿಸತೊಡಗಿದ.

* * *

ಡಿಗ್ರಿ ಎರಡನೇ ವರ್ಷದಲ್ಲಿ ಕೇಶವ, ಓಬಳಿ ಸ್ನೇಹಿತರಾದರು. ಕಾಲೇಜಿನ ಸಮತಾ ವಿದ್ಯಾರ್ಥಿ ಕೂಟದ ಚಟುವಟಿಕೆಗಳಲ್ಲಿ